## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.543/2022

**PW**: 1

**ದಿನಾಂಕ 22.07.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ.ಎಸ್.ವಿ.ಕೆ. ವಕೀಲರಿಂದ:**

ನಾನು ಪದವಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಗೆ ಇಬ್ಬರು ಸಹೋದರರು ಮತ್ತು 6 ಜನ ಸಹೋದರಿಯರು ಇರುತ್ತಾರೆ. ನಮ್ಮ ತಂದೆಯ ಹೆಸರು ಭೂಸಪ್ಪ ಎಂದರೆ ಸರಿ. ಸೋಮಪ್ಪ ಇವರು ನಮ್ಮ ದೊಡ್ಡಪ್ಪ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಇವರು ಎಷ್ಟನೇ ಇಸವಿಯಲ್ಲಿ ವಾಟ್ನಿಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವೆಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ದಾಖಲು ಮಾಡುವ ಸಮಯದಲ್ಲಿ ನಾನು ಯಾವ ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದು ನೋಡಿರುತ್ತೇನೆ. ದಾವಾ ದಾಖಲು ಮಾಡಿದ ನಂತರ ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನನ್ನ ತಂದೆ ಮತ್ತು ನಮ್ಮ ದೊಡ್ಡಪ್ಪ ಎಷ್ಟನೇ ಇಸವಿಯಲ್ಲಿ ವಾಟ್ನಿಯಾಗಿರುತ್ತಾರೆ ಎಂದು ನೋಡಿಲ್ಲ. ನನ್ನ ಜನ್ಮದಿನಾಂಕ 23.03.1999 ಇರುತ್ತದೆ. ದಾವಾ ದಾಖಲು ಮಾಡುವ ಸಮಯದಲ್ಲಿ ದಾವಾ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇರಲಿಲ್ಲ ಆದರೆ ಸಾಕ್ಷಿಯು ಮುಂದುವರೆದು ದಾವಾ ಆಸ್ತಿಗಳು ನನ್ನ ಪೂರ್ವಜರ ಆಸ್ತಿ ಎಂದು ನುಡಿಯುತ್ತಾರೆ. ದಾವಾ ದಾಖಲು ಮಾಡುವ ಸಮಯದಲ್ಲಿ ದಾವಾ ಆಸ್ತಿಯು 7 ನೇ ಪ್ರತಿವಾದಿಯವರ ಹೆಸರನಲ್ಲಿ ಇತ್ತು. ನನ್ನ ತಂದೆ 1 ನೇ ಪ್ರತಿವಾದಿ ನೇರವಾಗಿ 7 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ 1 ನೇ ಪ್ರತಿವಾದಿಯು ನೇರವಾಗಿ 7 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ಬರೆಸಿಲ್ಲ. 4 ರಿಂದ 6 ನೇ ಪ್ರತಿವಾದಿಯರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಖರೀದಿ ಪತ್ರವನ್ನು ರದ್ದುಮಾಡಲು ಪ್ರಾರ್ಥನೆ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಖರೀದಿ ಪತ್ರವನ್ನು ನಾನು ನೋಡಿಲ್ಲ. 7 ನೇ ಪ್ರತಿವಾದಿಗೆ ದಾವಾ ಜಮೀನು ಮಾರಾಟವಾಗಿರುತ್ತದೆ ಎಂದು ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು 7 ನೇ ಪ್ರತಿವಾದಿಯು ನಮ್ಮ ಮನೆಗೆ ಬಂದು ದಾವಾ ಜಮೀನು ನಮ್ಮದು ಇರುತ್ತದೆ ಎಂದು ನಮಗೆ ಹೊಡೆಯುವುದು, ಬಡೆಯುವುದು ಮಾಡಿದಾಗ ಗೊತ್ತಾಗಿರುತ್ತದೆ ಎಂದು

-2-

ನುಡಿಯುತ್ತಾರೆ. ಈ ತರಹ ದಾವೆ ಮಾಡಿ ಎಂದು 1 ನೇ ಪ್ರತಿವಾದಿಯವರು ನಿಮಗೆ ಹೇಳಿರುತ್ತಾರಾ ಎಂದರೆ ಸಾಕ್ಷಿಯು ಅವರು ಯಾರು ಹೇಳಿಲ್ಲವೆಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ

ಹಾಜರುಮಾಡಿರುವ ಎಲ್ಲಾ ದಾಖಲೆಗಳನ್ನು ನಾನೇ ತೆಗೆಯಿಸಿ ನಮ್ಮ ವಕೀಲರಿಗೆ ನೀಡಿರುತ್ತೇನೆ. ದಾಖಲೆಯನ್ನು ತೆಗೆಯಿಸುವಾಗ 7 ನೇ ಪ್ರತಿವಾದಿಗೆ ಮಾಡಿದ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಎಷ್ಟು ಹಣಕ್ಕೆ ಖರೀದಿ ಆಗಿರುತ್ತದೆ ಎಂದು ನಾನು ನೋಡಿಲ್ಲ. 7 ನೇ ಪ್ರತಿವಾದಿಗೆ ಯಾರು ಖರೀದಿ ಹಾಕಿ ಕೊಟ್ಟಿರುತ್ತಾರೆ ಎಂದು ನಾನು ನೋಡಿಲ್ಲ. 7 ನೇ ಪ್ರತಿವಾದಿಯು ದಿಃ06.08.2019 ರಂದು 3 ಲಕ್ಷದಾ 70 ಸಾವಿರ ರೂ.ಗಳಿಗೆ ಖರೀದಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪ್ರಕಾರ 7 ನೇ ಪ್ರತಿವಾದಿಯು ದಾವಾ ಆಸ್ತಿಯ ಕಬ್ಜಾ ವಹಿವಾಟನ್ನು ಮಾಡುತ್ತಾನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ 1 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಇಬ್ಬರು ಸಹೋದರಿಯರು ಮತ್ತು ಇಬ್ಬರು ಸಹೋದರರು ಇರುತ್ತೇವೆ. ನಾವು ನನ್ನ ಸಹೋದರಿಯರು, ಸಹೋದರರು, ತಂದೆ ತಾಯಿ ಎಲ್ಲರೂ ಕೂಡಿ ಇರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ಮುಗ್ದ ಖರೀದಿದಾರ ಇದ್ದರು ಸಹ ಆತನಿಗೆ ತೊಂದರೆ ಕೊಡಲು ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನಮ್ಮ ಶಿಕ್ಷಣದ ಸಲುವಾಗಿ ಹಾಗೂ ಕುಟುಂಬದ ಪ್ರಾಪಂಚಿಕ ಅಡಚಣೆಗಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರು ಸಹ 7 ನೇ ಪ್ರತಿವಾದಿಗೆ ನಷ್ಟ ಮಾಡಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.